ಕೆಲ ಮಕ್ಕಳಲ್ಲಿ ಜ್ವರ ಮತ್ತು ಕೆಮ್ಮುಗಳು ಕ್ಷಿಪ್ರಗತಿಯಲ್ಲಿ ಉಲ್ಬಣಿಸುವುದುಂಟು. ಮುಂದಿನ ಒಂದೆರಡು ದಿನಗಳಲ್ಲೇ ಮಗುವಿನ ಬಾಯಿಯ ಒಳಭಾಗದಲ್ಲಿ 'ಕಾಪ್ಲಿಕ್ಸ್ ಸ್ಪಾಟ್' ಎಂದು ಕರೆಯಲ್ಪಡುವ, ಮಧ್ಯದಲ್ಲಿ ಬಿಳಿಯ ಚುಕ್ಕೆಯಿರುವ ಕೆಂಪು ಗುಳ್ಳೆಗಳು ಗುಂಪು ಗುಂಪಾಗಿ ಕಾಣಿಸಿಕೊಳ್ಳುತ್ತವೆ.

ಮುಂದಿನ 3 ರಿಂದ 5 ದಿನಗಳ ಬಳಿಕ ಮಗುವಿನ ಮುಖ ಕುತ್ತಿಗೆಗಳ ಮೇಲೆ ಪ್ರತ್ಯಕ್ಷವಾಗುವ 'ಬೆವರುಸಾಲೆ'ಯಂತಹ ಅಸಂಖ್ಯ ಗುಳ್ಳೆಗಳು ಕ್ರಮೇಣ ಕೈ, ಎದೆ, ಹೊಟ್ಟೆ, ತೊಡೆ ಮತ್ತು ಕಾಲುಗಳ ಮೇಲೆ ಹರಡುತ್ತವೆ. ಈ ಹಂತದಲ್ಲಿ ಕಾಪ್ಲಿಕ್ಸ್ ಸ್ಪಾಟ್ ಗಳು ಮಾಯವಾಗುತ್ತವೆ. ಶರೀರದಾದ್ಯಂತ ಮೂಡಿರುವ ಗುಳ್ಳೆಗಳ ಸಂಖ್ಯೆ ಅತಿಯಾಗಿದ್ದಲ್ಲಿ ವ್ಯಾಧಿಯ ತೀವ್ರತೆಯೂ ಅತಿಯಾಗಿರುತ್ತದೆ. ಈ ಗುಳ್ಳೆಗಳು ಮುಂದಿನ ಕೆಲವೇ ದಿನಗಳಲ್ಲಿ ಮಾಯವಾಗಲು ಆರಂಭಿಸುತ್ತವೆ.

ಸಾಮಾನ್ಯವಾಗಿ ಐದರಿಂದ ಎಂಟು ವರ್ಷ ವಯಸ್ಸಿನ ಮಕ್ಕಳನ್ನು ಹೆಚ್ಚಾಗಿ ಕಂಡುಬರುತ್ತದೆ. ಕೆಲವೊಂದು ಉದಾಹರಣೆಗಳಲ್ಲಿ ವಯಸ್ಕರಲ್ಲಿಯೂ ಕಂಡುಬರುವುದಿದೆ.

ದಡಾರ ರೋಗ ಪೀಡಿತ ಮಕ್ಕಳ ಜೊಲ್ಲಿನ ಕಣಗಳಿಂದ ಹಾಗೂ ರೋಗಿಯೊಂದಿಗೆ ನೇರ ಸಂಪರ್ಕವಿರುವ ವ್ಯಕ್ತಿಗಳಿಂದ ಈ ವೈರಸ್ ಇತರರಿಗೆ ಹರಡಬಲ್ಲದು. ಆರೋಗ್ಯವಂತರ ಶರೀರದಲ್ಲಿ ಪ್ರವೇಶ ಗಳಿಸಿದ ಈ ವೈರಸ್, 7 ರಿಂದ 14 ದಿನಗಳಲ್ಲಿ ದಡಾರದ ಲಕ್ಷಣಗಳನ್ನು ತೋರುವುದು.

### ಚಿಕಿತ್ಸೆ

ದಡಾರಕ್ಕೆ ಯಾವುದೇ ರೀತಿಯ ಔಷಧಗಳಿಲ್ಲ. ಆದರೆ ಈ ಸಾಂಕ್ರಾಮಿಕ ರೋಗಕ್ಕೆ ನೀಡುವ ಚುಚ್ಚುಮದ್ದನ್ನು ನೀಡಿದಾಗ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಹೀಗಾಗಿ ಈ ಲಸಿಕೆ ಹಾಕಿಸಿಕೊಳ್ಳಲೇಬೇಕು.

## ರುಬೆಲ್ಲ ಸೋಂಕು (ಜರ್ಮನ್ ದಡಾರ)

ರುಬೆಲ್ಲ (ಕೆಂಬಾರ) ಕೂಡ ವೈರಾಣುವಿನಿಂದ ಆಗುವ ಸೋಂಕಾಗಿದ್ದು, ಮಕ್ಕಳು ಹಾಗೂ ಪ್ರಾಯದವರಲ್ಲಿ (ದೊಡ್ಡವರಲ್ಲಿ) ಕಂಡುಬರುತ್ತದೆ.

### ಲಕ್ಷಣಗಳು

- ಮುಖದಲ್ಲಿ ಮೊದಲು ಕೆಂಪು ಕಲೆ ಕಂಡು ಬರುತ್ತದೆ.
- ಗಂಟಲಲ್ಲಿ ಊತ ಕಾಣಿಸಿಕೊಳ್ಳುವುದು
- ಜ್ವರ, ವಾಂತಿ, ಗಂಟು ನೋವು
- ದೊಡ್ಡವರಲ್ಲಿ ಸಂಧಿ ವಾತ, ದುಗ್ಧರಸ ಗ್ರಂಥಗಳ ಊತ

ಗರ್ಭಾವಸ್ಥೆಯಲ್ಲಿ ಈ ರೋಗ ತಾಯಿಯಲ್ಲಿ ಕಂಡು ಬಂದರೆ, ಮಗುವಿನ ಜೀವಕ್ಕೆ ಹಾನಿಯಾಗಬಹುದು, ಅಥವಾ ಅವಧಿ ಪೂರ್ವ ಜನನವಾದಲ್ಲಿ ಮಕ್ಕಳಲ್ಲಿ ವಿಕಲಾಂಗತೆ ಕಾಣಬಹುದು. ಹುಟ್ಟಿದ ಮಗುವಿನಲ್ಲಿ ತೀವ್ರವಾದ ಜನ್ಮಜಾತ ತೊಂದರೆಗಳು ಕಣ್ಣಿನ ಪೊರೆ, ಗ್ಲುಕೋಮ, ಕಿವುಡುತನ, ಹೃದಯದ ತೊಂದರೆಗಳು, ಯಕೃತ್‌ಗುಲ್ಮದ ತೊಂದರೆಗಳು, ತಲೆ ಕಿರಿದಾಗಿರುವುದು, ಮಂದ ಬುದ್ಧಿ, ರಕ್ತದ ತೊಂದರೆ ಇರಬಹುದು. ಈ ತೊಂದರೆಗೆ ಯಾವುದೇ ರೀತಿಯ ನಿರ್ದಿಷ್ಟ ಚಿಕಿತ್ಸೆ ಇಲ್ಲ.

## ಎಂಆರ್ ಅಭಿಯಾನ ಯಾತಕ್ಕಾಗಿ?

ದಡಾರ, ರುಬೆಲ್ಲ ಕಾಯಿಲೆಯು ಕ್ಷಿಪ್ರ ರೀತಿಯಲ್ಲಿ ಹರಡುವ ವೈರಸ್‌ನ ಸಾಂಕ್ರಾಮಿಕ ರೋಗ. ಇದನ್ನು ಲಸಿಕೆಯಿಂದ ತಡೆಯಬಹುದು. ಕಾಯಿಲೆ ಬಂದ ಮೇಲೆ ಯಂತ್ರ– ತಂತ್ರ ಕಟ್ಟುವ ವಿಚಾರಿವಿದಲ್ಲ! ದಡಾರದಿಂದ ಮಕ್ಕಳಿಗೆ ತೀವ್ರವಾದ ನ್ಯುಮೋನಿಯಾ (ಶ್ವಾಸದ ಸೋಂಕು) ಬೇದಿ (ಅತಿಸಾರ), ಮೆದುಳಿನ ಜ್ವರ ಮತ್ತು ಕಣ್ಣಿನ ನಂಜು ಮತ್ತು ಕುರುಡುತನವಲ್ಲದೆ ಕಿವಿ ಸೋರಿಕೆಯೂ ಆಗುತ್ತದೆ.

ಈ ಅಭಿಯಾನದ ಸಮಯದಲ್ಲಿ ಮಗುವಿಗೆ ಸಹಜ ಲಸಿಕೆಗಳು ಯಾವುದಾದರೂ ಇದ್ದಲ್ಲಿ (ಎಂಆರ್ ಲಸಿಕೆಗಳು) ಅದನ್ನು ನಾಲ್ಕು ವಾರಗಳ ನಂತರ ಪಡೆಯಬಹುದು. ಬೇರೆ ಲಸಿಕೆಗಳು ಡಿಪಿಟಿ ಇದ್ದರೆ ಈ ಅಭಿಯಾನದ ಸಮಯದಲ್ಲೇ ಅವುಗಳನ್ನು ತೆಗೆದುಕೊಳ್ಳಬಹುದು.

ಈ ಲಸಿಕೆಯನ್ನು ಬಲಗೈನ ತೋಳಿಗೆ ಕೊಡಲಾಗುತ್ತದೆ. ಲಸಿಕೆ ಕೊಟ್ಟ ಮೇಲೆ ಅರ್ಧ ಗಂಟೆಯವರೆಗೆ ಲಸಿಕಾ ಕೇಂದ್ರದಲ್ಲಿ ಇರುವುದು ಅತಿ ಅವಶ್ಯಕ. ಅಪೌಷ್ಟಿಕ ಮಕ್ಕಳಿಗೆ ಈ ಲಸಿಕೆ ಕೊಡಲೇಬೇಕು. ಲಸಿಕೆಯ ನಂತರ 2 ವಾರಗಳವರೆಗೂ ಯಾವುದೇ ರಕ್ತ ಇಲ್ಲವೆ ರಕ್ತ ಸಂಬಂಧಿ ಔಷಧಿಗಳನ್ನು ತೆಗೆದುಕೊಳ್ಳಬಾರದು.

## ಯಾರು ಲಸಿಕೆ ತೆಗೆದುಕೊಳ್ಳುವಂತಿಲ್ಲ..?

ತೀವ್ರತರನಾದ ಜ್ವರ ಮತ್ತು ತೀವ್ರತರನಾದ ಕಾಯಿಲೆ ಇದ್ದ ಮಕ್ಕಳು
ಗರ್ಭಿಣಿ ಸ್ತ್ರೀಯರು
ರೋಗ ನಿರೋಧಕ ಶಕ್ತಿ ಕುಂದಿರುವ ಕಾಯಿಲೆ ಇದ್ದವರು
ಏಡ್ಸ್ / ಕ್ಯಾನ್ಸರ್ ರೋಗಿಗಳು

(ಲೇಖಕಿ ಬೆಂಗಳೂರಿನಲ್ಲಿರುವ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕಿ. ವೈದ್ಯರ ಸಂಪರ್ಕ ಸಂಖ್ಯೆ: 080 26693173
ಇಮೇಲ್: ashabenakappa@gmail.com)

## ಮುನ್ನೆಚ್ಚರಿಕೆ ಏನು?

ದಡಾರ ರೋಗಿಯ ಬಾಯಲ್ಲಿ, ಮೂಗಿನಲ್ಲಿ ಮತ್ತು ಗಂಟಲ ಸ್ರವಿಕೆಯಲ್ಲಿ ವೈರಸ್‌ಗಳಿರುತ್ತವೆ. ರೋಗಿ ಸೀನಿದಾಗ, ಕೆಮ್ಮಿದಾಗ ಹೊರಗಿನ ಪರಿಸರಕ್ಕೆ ವೈರಸ್‌ಗಳು ಸೇರುತ್ತವೆ. ಉಸಿರಾಟದ ಮೂಲಕ ರೋಗಾಣುಗಳು ಆರೋಗ್ಯವಂತ ವ್ಯಕ್ತಿಯ ದೇಹ ಪ್ರವೇಶಿಸಿ, ರೋಗ ಲಕ್ಷಣಗಳನ್ನು ಹೊರಹೊಮ್ಮಿಸುತ್ತವೆ. ಆರೋಗ್ಯವಂತ ಮಗುವಿಗೆ ಸೋಂಕಿನ ಮೂಲಕ ದಡಾರ ಹರಡುತ್ತದೆ.

ದಡಾರ ರೋಗಿ ಉಪಯೋಗಿಸಿದ ಸೋಂಕಿನಿಂದ ಕೂಡಿದ ವಸ್ತುಗಳಿಂದಲೂ ಸೋಂಕು ಹರಡಬಹುದು. ರೋಗ ಕಾಣಿಸಿಕೊಂಡ ಪ್ರಾರಂಭದ ಐದು ದಿನಗಳವರೆಗೆ ಸೋಂಕು ತೀವ್ರವಾಗಿರುವುದರಿಂದ ಬೇರೆ ಮಕ್ಕಳಿಂದ ಮಗುವನ್ನು ಪ್ರತ್ಯೇಕವಾಗಿರಿಸುವುದು ಅಗತ್ಯ. ದಡಾರ ತಡೆಗಟ್ಟುವ ಚುಚ್ಚುಮದ್ದನ್ನು ಕೊಡಿಸದಿದ್ದರೆ ಮಗುವಿಗೆ ರೋಗ ಬರುವ ಸಾಧ್ಯತೆ ಹೆಚ್ಚು. ಎಳೆಯ ಮಕ್ಕಳಲ್ಲಿ ಮತ್ತು ಅಪೌಷ್ಟಿಕತೆ ಹೊಂದಿರುವ ಮಕ್ಕಳಲ್ಲಿ ದಡಾರ ಬಹಳ ತೀವ್ರ ತೊಡಕನ್ನುಂಟು ಮಾಡುತ್ತದೆ. ದಡಾರ ಪ್ರಾಣಕ್ಕೆ ಹಾನಿಕಾರಕ ಅಲ್ಲವಾದರೂ, ಮಕ್ಕಳಿಗೆ ಸ್ವಲ್ಪಮಟ್ಟಿಗೆ ತೊಂದರೆಯನ್ನುಂಟು ಮಾಡುತ್ತದೆ. ಇದರಿಂದಾಗಿ ಮಕ್ಕಳು ಕಿರಿಕಿರಿ ಮಾಡುತ್ತವೆ.

ದಡಾರ ಇರುವ ಮಗುವನ್ನು ಶಾಲೆಗೆ ಕಳುಹಿಸಿದಲ್ಲಿ ಇತರ ಮಗುವಿಗೂ ರೋಗ ಅಂಟುವ ಸಾಧ್ಯತೆ ಹೆಚ್ಚು. ಈ ರೋಗ ಕಾಣಿಸಿಕೊಳ್ಳುವ ಮೊದಲನೇ ದಿನ ಜ್ವರ ಬರುತ್ತದೆ. ಆರಂಭದಲ್ಲಿ ಮುಖದ ಮೇಲಷ್ಟೇ ಕಾಣಿಸಿಕೊಳ್ಳುವ ನೀರಗುಳ್ಳೆಗಳು ದಿನಗಳೆದಂತೆ ಹೊಟ್ಟೆ ಹಾಗೂ ದೇಹದ ಇತರ ಭಾಗಕ್ಕೂ ವಿಸ್ತರಿಸುತ್ತವೆ. ನೀರ ಗುಳ್ಳೆಗಳಿಂದ ಪ್ರಾರಂಭದಲ್ಲಿ ಸ್ವಲ್ಪ ನವೆ ಇರುತ್ತದೆ. ಮೊದಲು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ಈ ದಡಾರ ಇತ್ತೀಚಿನ ವರ್ಷಗಳಲ್ಲಿ 18 ರಿಂದ 40 ವರ್ಷ ವಯೋಮಾನದವರಲ್ಲೂ ಕಂಡು ಬರುತ್ತಿದೆ. ಮಕ್ಕಳಲ್ಲಿ ದಡಾರ ಕಾಣಿಸಿಕೊಂಡರೆ 'ಅಮ್ಮ' ಅಥವಾ 'ದೇವಿಯ ಕಾಟ'ವೆಂಬ ಮೂಢನಂಬಿಕೆಯಿಂದ ಕೆಲವರು ದೇವಸ್ಥಾನಗಳಿಗೆ ತೆರಳಿ, ಎಣ್ಣೆ ಹಾಕಿ ಬರುತ್ತಾರೆ. ಇದರ ಬದಲು ತಕ್ಷಣ ವೈದ್ಯಕೀಯ ಚಿಕಿತ್ಸೆ ನೀಡಿದಲ್ಲಿ ಮಗು ಬೇಗ ಗುಣಮುಖವಾಗುತ್ತದೆ.

## ಮಕ್ಕಳಲ್ಲಿ ದಡಾರ

ರಾಜ್ಯದಲ್ಲಿ 2014ರಲ್ಲಿ 903 ಮಕ್ಕಳಲ್ಲಿ ದಡಾರ ಕಾಣಿಸಿಕೊಂಡಿತ್ತು. 2015ರಲ್ಲಿ 285 ಹಾಗೂ 2016ರ ಜನವರಿಯಿಂದ ಈವರೆಗೆ (ಕೇವಲ 6 ತಿಂಗಳಲ್ಲಿ) 265 ಮಕ್ಕಳಲ್ಲಿ ದಡಾರ ಕಾಣಿಸಿಕೊಂಡಿದೆ. ಇದು ಆತಂಕದ ವಿಚಾರ.